# ಹಿಂದಿ ಹೇರಿಕೆ ಸರಿಯಲ್ಲ

ದೆಹಲಿಯಲ್ಲಿ ಕುಳಿತು ದೇಶ ಆಳುವವರಿಗೆ ಚಟವೊಂದು ಅಂಟಿಕೊಂಡಂತಿದೆ. ಅದು ಹಿಂದಿಯನ್ನು ರಾಷ್ಟ್ರಭಾಷೆಯ ಹೆಸರಿನಲ್ಲಿ ಎಲ್ಲ ರಾಜ್ಯಗಳ ಮೇಲೆ ಹೇರುವ ಚಟ. ಸ್ವಾತಂತ್ರ್ಯ ಸಿಕ್ಕಿದ ಸಂದರ್ಭದಲ್ಲೇ ಹಿಂದಿಯನ್ನು ದೇಶದ ಅಧಿಕೃತ ಭಾಷೆ ಎಂದು ನಿರ್ಧರಿಸುವ ಯತ್ನ ನಡೆದಿತ್ತು. ಆದರೆ ಆಗ ದಕ್ಷಿಣ ಭಾರತದಲ್ಲಿ, ಅದರಲ್ಲೂ ಮುಖ್ಯವಾಗಿ ತಮಿಳುನಾಡಿನಲ್ಲಿ ಭುಗಿಲೆದ್ದ ಪ್ರತಿಭಟನೆಯಿಂದಾಗಿ ಆ ಪ್ರಯತ್ನವನ್ನು ಕೈಬಿಡಲಾಗಿತ್ತು. ಮಾತ್ರವಲ್ಲ, ಹಿಂದಿ, ಇಂಗ್ಲಿಷ್, ಕನ್ನಡ ಸಹಿತ ಒಟ್ಟು 23 ಭಾಷೆಗಳನ್ನು ಸಂವಿಧಾನದ ಎಂಟನೇ ಷೆಡ್ಯೂಲ್‌ನಲ್ಲಿ ಸೇರಿಸಿ, ಎಲ್ಲ ಭಾಷೆಗಳಿಗೂ ಬೆಳೆಯಲು ಸಮಾನ ಅವಕಾಶಗಳನ್ನು ಸೃಷ್ಟಿಸಲಾಯಿತು. ಆದರೆ ಈಗ ಮತ್ತೆ ಎನ್‌ಡಿಎ ನೇತೃತ್ವದ ಕೇಂದ್ರ ಸರ್ಕಾರ, ಇತಿಹಾಸವನ್ನೇ ಮರೆತವರಂತೆ ಹಿಂದಿಯನ್ನು ಎಲ್ಲ ರಾಜ್ಯಗಳ ಮೇಲೆ ಹೇರಲು ಶುರು ಮಾಡಿದೆ. ಇನ್ನೇನು ನಿವೃತ್ತರಾಗಲು ನಾಲ್ಕು ತಿಂಗಳಷ್ಟೇ ಉಳಿದಿರುವ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರು ಹಿಂದಿ ಹೇರಿಕೆಯ ವಿವಾದಾತ್ಮಕ ಆದೇಶವೊಂದಕ್ಕೆ ಕಳೆದ ವಾರ ಸಹಿ ಹಾಕಿದ್ದಾರೆ. ಈ ಆದೇಶದ ಪ್ರಕಾರ, ಇನ್ನು ಮುಂದೆ ಹಿಂದಿ ಬಲ್ಲ ರಾಷ್ಟ್ರಪತಿ, ಉಪರಾಷ್ಟ್ರಪತಿ, ಪ್ರಧಾನಿ ಮತ್ತು ಕೇಂದ್ರ ಸಚಿವ ಸಂಪುಟದ ಎಲ್ಲ ಸಚಿವರೂ ಕಡ್ಡಾಯವಾಗಿ ಹಿಂದಿಯಲ್ಲೇ ಅಧಿಕೃತ ವ್ಯವಹಾರಗಳನ್ನು ನಡೆಸಬೇಕು. ಕೇಂದ್ರ ಸರಕಾರದ ಹೇಳಿಕೆ, ಟಿಪ್ಪಣಿ, ಭಾಷಣ, ಆದೇಶಗಳೆಲ್ಲವೂ ಹಿಂದಿ ಭಾಷೆಯಲ್ಲೇ ಇರಬೇಕು. ಅಧಿಕೃತ ಭಾಷೆಗಳ ಕುರಿತ ಸಂಸತ್ ಸಮಿತಿ ಆರು ವರ್ಷಗಳ ಹಿಂದೆ ಸಲ್ಲಿಸಿದ ಒಟ್ಟು 117 ಶಿಫಾರಸುಗಳನ್ನು ಒಳಗೊಂಡ ವರದಿಯನ್ನು ಈಗ ಈ ಮೂಲಕ ಜಾರಿಗೆ ತರಲಾಗಿದೆ.

ಈ ಶಿಫಾರಸುಗಳ ಪಟ್ಟಿಯಲ್ಲಿ ದೇಶದ ಎಲ್ಲ ಶಾಲೆಗಳಲ್ಲೂ ಹಿಂದಿ ಭಾಷೆಯನ್ನು ಕಡ್ಡಾಯವಾಗಿ ಕಲಿಸಬೇಕು ಎಂಬ ಶಿಫಾರಸು ಕೂಡಾ ಇತ್ತು. ರಾಷ್ಟ್ರಪತಿಯವರು ಆ ಶಿಫಾರಸಿಗೆ ಸಹಿ ಮಾಡಲು ನಿರಾಕರಿಸಿದ್ದಾರೆ. ಆದರೆ ಸಿಬಿಎಸ್‌ಇ ಪಠ್ಯಕ್ರಮದ ಶಾಲೆಗಳು ಹಾಗೂ ಕೇಂದ್ರೀಯ ವಿದ್ಯಾಲಯಗಳಲ್ಲಿ ಹಿಂದಿ ಭಾಷೆಯನ್ನು ಕಡ್ಡಾಯಗೊಳಿಸಿ ಈಗಾಗಲೆ ಆದೇಶ ಹೊರಡಿಸಲಾಗಿದೆ. ಎನ್‌ಡಿಎ ಸರ್ಕಾರ ದೇಶದಲ್ಲಿರುವ ಇತರ ಭಾಷೆಗಳ ವಿರುದ್ಧ ತಾರತಮ್ಯ ನಡೆಸಲು ಹೊರಟಿದೆ ಎನ್ನುವುದು ಸ್ಪಷ್ಟ. ಗಣರಾಜ್ಯ ತತ್ವಗಳಿಗೆ ವಿರುದ್ಧವಾದ ಈ ಹಿಂದಿ ಹೇರಿಕೆಯ ಕ್ರಮ, ದಕ್ಷಿಣದ ರಾಜ್ಯಗಳಲ್ಲಿ ಹೊಸ ಸಮಸ್ಯೆಗಳನ್ನು ಉಂಟು ಮಾಡುವುದು ಖಂಡಿತ. ಈಗಾಗಲೆ ತಮಿಳ್ನಾಡಿನಲ್ಲಿ ಹಿಂದಿ ವಿರೋಧಿ ಪ್ರತಿಭಟನೆಯ ಸ್ವರ ಗಟ್ಟಿಯಾಗಿ ಕೇಳಿಬಂದಿದೆ. ದಕ್ಷಿಣದ ಉಳಿದ ರಾಜ್ಯಗಳೂ ಪ್ರತಿಭಟನೆಯ ಹಾದಿ ಹಿಡಿಯುವ ಮುನ್ನ ಕೇಂದ್ರ ಸರ್ಕಾರ ಎಚ್ಚೆತ್ತುಕೊಂಡು ಹಿಂದಿ ಹೇರಿಕೆಯ ನಡೆಯನ್ನು ಹಿಂತೆಗೆದುಕೊಳ್ಳುವುದು ಒಳ್ಳೆಯದು.

ದೇಶದಾದ್ಯಂತ ಶೇಕಡಾ 30ರಷ್ಟು ಮಂದಿ ಮಾತ್ರ ಮಾತನಾಡುವ ಭಾಷೆಯೊಂದನ್ನು ರಾಷ್ಟ್ರಭಾಷೆಯೆಂದು ಒತ್ತಾಯದಿಂದ ಹೇರುವುದು ನಮ್ಮ ಸಂವಿಧಾನದ ಆಶಯಗಳಿಗೂ ವಿರುದ್ಧವಾದದ್ದು. ಸಂವಿಧಾನದ ಕರಡು ಸಭೆಯಲ್ಲಿ ಡಾ.ಅಂಬೇಡ್ಕರ್ ಸಹಿತ ಹಲವು ಹಿರಿಯರು ಈ ಬಗ್ಗೆ ಸುದೀರ್ಘ ಚರ್ಚೆ ನಡೆಸಿದ ಬಳಿಕವೇ ಎಂಟನೇ ಷೆಡ್ಯೂಲ್‌ನಲ್ಲಿ ದೇಶದ ಎಲ್ಲ ರಾಜ್ಯಭಾಷೆಗಳಿಗೂ ಏಕರೂಪದ ಮಹತ್ವ ನೀಡುವ ನಿರ್ಧಾರಕ್ಕೆ ಬಂದಿದ್ದರು. ವಿಭಿನ್ನ ಧರ್ಮಗಳನ್ನು ಅನುಸರಿಸುವ ಸ್ವಾತಂತ್ರ್ಯದಂತೆಯೇ ವಿವಿಧ ಭಾಷೆಗಳನ್ನು ಆಯಾ ರಾಜ್ಯಗಳಲ್ಲಿ ಬಳಸುವ ಸ್ವಾತಂತ್ರ್ಯವನ್ನು ಸಂವಿಧಾನವು ನಮಗೆ ನೀಡಿದೆ. ಸಂಸತ್ತಿನಲ್ಲಿ ಕೂಡಾ ರಾಜ್ಯಗಳ ಭಾಷೆಗಳನ್ನು ಆಡುವ ಅವಕಾಶವನ್ನು ನೀಡಲಾಗಿದೆ. ಸ್ವತಃ ರಾಷ್ಟ್ರಪತಿ ಪ್ರಣಬ್ ಮುಖರ್ಜಿಯವರು ಪಶ್ಚಿಮ ಬಂಗಾಳದವರಾಗಿದ್ದು, ತಮ್ಮ ಅಧಿಕಾರದ ಅವಧಿಯಲ್ಲಿ ಹಿಂದಿಗಿಂತ ಹೆಚ್ಚಾಗಿ ಇಂಗ್ಲಿಷ್‌ನಲ್ಲೇ ವ್ಯವಹಾರ ನಡೆಸುತ್ತಾ ಬಂದಿದ್ದಾರೆ. ಈಗ ಕೇಂದ್ರ ಸರ್ಕಾರದ ದಿನನಿತ್ಯದ ವ್ಯವಹಾರಗಳಲ್ಲಿ ಹಿಂದಿಯನ್ನು ಕಡ್ಡಾಯ ಮಾಡುವ ಮೂಲಕ ಉಳಿದ ಭಾಷೆಗಳ ಅಭಿವೃದ್ಧಿಗೆ ಕಾಲ್ತೊಡಕುಂಟು ಮಾಡಲು ಹೊರಟಿದೆ ಎನ್ನುವುದು ಸ್ಪಷ್ಟ. ಭಾಷಾ ಯಜಮಾನಿಕೆ ಹೇರುವ ಉದ್ದೇಶ ಸರ್ಕಾರಕ್ಕೆ ಇಲ್ಲವೆಂದಾದಲ್ಲಿ, ಉತ್ತರ ಭಾರತದ ರಾಜ್ಯಗಳಲ್ಲಿ ದಕ್ಷಿಣ ಭಾರತದ ಯಾವುದಾದರೂ ಭಾಷೆಯನ್ನು ಏಕೆ ಕಡ್ಡಾಯಗೊಳಿಸಬಾರದು? ರಾಷ್ಟ್ರೀಯ ಭಾವೈಕ್ಯದ ಬಗ್ಗೆ ನಿಜಕ್ಕೂ ಕೇಂದ್ರ ಸರ್ಕಾರಕ್ಕೆ ಕಾಳಜಿ ಇದೆಯೆಂದಾದರೆ ಹಿಂದಿ ಹೇರಿಕೆಯ ಈ ಯತ್ನವನ್ನು ಕೈಬಿಡಬೇಕು. ಇಲ್ಲವಾದಲ್ಲಿ, ಕೇಂದ್ರ ಸರ್ಕಾರ ಅನುಸರಿಸುತ್ತಿರುವ ಭಾಷಾಂಧತೆಯ ಧೋರಣೆಯನ್ನು ದಕ್ಷಿಣದ ರಾಜ್ಯಗಳೂ ಅನುಸರಿಸಲು ಕೆಟ್ಟ ಮಾದರಿ ಹಾಕಿಕೊಟ್ಟಂತಾಗುತ್ತದೆ. ಹೀಗಾದರೆ ದೇಶದಾದ್ಯಂತ ಭಾಷಾ ಪ್ರಕ್ಷುಬ್ಧತೆಯನ್ನು ಹರಡಲು ಕೇಂದ್ರ ಸರ್ಕಾರವೇ ಕಾರಣವಾಗುವ ಸಾಧ್ಯತೆ ಇದೆ.

■ ಬಿ.ಎಂ. ಹನೀಫ್

ದೇಶದಾದ್ಯಂತ ಶೇಕಡಾ 30ರಷ್ಟು ಮಂದಿ ಮಾತ್ರ ಮಾತನಾಡುವ ಭಾಷೆಯೊಂದನ್ನು ರಾಷ್ಟ್ರಭಾಷೆಯೆಂದು ಒತ್ತಾಯದಿಂದ ಹೇರುವುದು ನಮ್ಮ ಸಂವಿಧಾನದ ಆಶಯಗಳಿಗೆ ವಿರುದ್ಧವಾದದ್ದು. ರಾಷ್ಟ್ರೀಯ ಭಾವೈಕ್ಯದ ಬಗ್ಗೆ ನಿಜಕ್ಕೂ ಕೇಂದ್ರ ಸರ್ಕಾರಕ್ಕೆ ಕಾಳಜಿ ಇದೆಯೆಂದಾದರೆ ಹಿಂದಿ ಹೇರಿಕೆಯ ಯತ್ನವನ್ನು ಕೈಬಿಡಬೇಕು.



ಈಶ್ವರ